Indian Journal of History and Archaeology

ISSN (E): 2582-225X
Vol-1 Issue 2, September-October, 2019, 34-41

# ಮೌಖಿಕ ಮಹಾಕಾವ್ಯಗಳ ರಚನೆ ಮತ್ತು ವಿಶಿಷ್ಟಾಂಶಗಳು

**ಹೇಮಾವತಿ ಬಿ. ಹೆಚ್**

**ಹೇಮಾವತಿ ಬಿ. ಹೆಚ್.**
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

**ಪೀಠಿಕೆ**

ಋಷಿಯಲ್ಲದವನು ಕಾವ್ಯ ರಚಿಸಲಾರ ಎನ್ನುವ ಮಾತು ನಮ್ಮ ಮೌಖಿಕ ಮಹಾಕಾವ್ಯಗಳಿಗೆ ಅನ್ವಯವಾಗುವಂತಿದೆ. ಮೌಖಿಕ ಮಹಾಕಾವ್ಯಗಳ ರಚನೆ ಒಂದು ತಪಸ್ಸಿದಂತೆ, ಹಾಡುವಾಗ ಧ್ಯಾನಾಸಕ್ತನಾಗಿ ಶುಚಿ, ಶುದ್ಧ ಮನಸ್ಸಿನ ಆಧಾರದ ಮೇಲೆ ಹಾಡಿದಾಗ ಒಂದು ಸಮುದಾಯದ ಆಚರಣೆಯೇ ತೆರೆದುಕೊಳ್ಳುತ್ತದೆ.

ವ್ಯಕ್ತಿ ನಿರ್ಮಿತ ಕಾವ್ಯಗಳ ರಚನೆಯ ಸಾಧ್ಯತೆಗಳನ್ನು ದುಡಿಸಿಕೊಂಡು ಒಂದು ಕಾಲಬದ್ಧ ಚೌಕಟ್ಟಿನಲ್ಲಿ ಹಿಡಿದಿಟ್ಟು ಅದನ್ನು ಲಿಖಿತ ರೂಪಕ್ಕೆ ತರುವ ಪದ್ಧತಿಯೇ ಮೌಖಿಕ ಕಾವ್ಯವಾಗಿದೆ. ಈ ಮಹಾಕಾವ್ಯಗಳ ಗಾತ್ರ, ಕಥಾವಸ್ತು, ವರ್ಣನೆ, ಸಾಹಿತ್ಯ, ಇವೆಲ್ಲವೂ ಮೌಖಿಕ ಲೋಕದಲ್ಲಿ ಭಿನ್ನವಾಗಿರುತ್ತವೆ. ಶಿಷ್ಟ ಕಾವ್ಯಗಳಿಗಿಂತ ವಿಭಿನ್ನವಾದ ದರ್ಶನ, ಲೋಕದೃಷ್ಟಿ ಸ್ಥಳೀಯ ಪ್ರದೇಶಿಕತೆಯನ್ನು ಸಾದರಪಡಿಸುತ್ತದೆ, ಈ ಮಹಾಕಾವ್ಯಗಳು ಆಯಾಯ ಸಮುದಾಯಗಳ ಸಾಂಸ್ಕೃತಿಕ ಐತಿಯ್ಯಗಳಾಗಿವೆ. ಮೌಖಿಕ ಮಹಾಕಾವ್ಯಗಳು ಹೇಗೆ ರೂಪುಗೊಂಡವು ಎಂಬುದರ ಬಗ್ಗೆ ವಾದಗಳಿವೆ. ಒಂದು ಶಿಕ್ಷಿತ ಸಮುದಾಯ ಅಭಿಪ್ರಾಯ ಪಡುವಂತೆ ಮೌಖಿಕ ಕಾವ್ಯಗಳು ಚದುರಿದ ಜನಪದ ಕವನಗಳು ಒಟ್ಟುಗೂಡಿ ಮಹಾಕಾವ್ಯದ ರೂಪ ತಳೆದುವು ಮತ್ತೊಂದು ಅಕ್ಷರ ಸಮುದಾಯದ ಅಭಿಪ್ರಾಯವೆಂದರೆ ಆಂತರಿಕ ಬೆಳವಣಿಗೆ ಫಲವಾಗಿ ಮಹಾಕಾವ್ಯಗಳು ರೂಪಗೊಂಡವು ಎಂಬ ಭಿನ್ನಾಭಿಪ್ರಾಯಗಳು ವ್ಯಕ್ತವಾಗಿದೆ ಇದೇ

ಅಭಿಪ್ರಾಯಗಳ ಆಧಾರದ ಮೇಲೆ ಚೌರಾ ಎಂಬ ವಿದ್ವಾಂಸರ ಹೀಗೆ ಹೇಳುತ್ತಾರೆ *"ಮೊದಲನೆಯದಾಗಿ ಅದರ ಪ್ರಾಮಾಣ್ಯವೆಂದರೆ ಪರಂಪರೆ ಅದರ ಕತೆಗಳು ಹಲವಾರು ಪೀಳಿಗೆಯಿಂದ ಸಾಗಿಬಂದವು. ಮತ್ತು ಯುಗಗಳಿಂದ ಪವಿತ್ರ ಕೃತಿವಾದವು"*[1] ಎಂದಿದ್ದಾರೆ.

ಮೌಖಿಕ ಮಹಾಕಾವ್ಯದಲ್ಲಿ ಇತಿಹಾಸ, ಐತಿಹ್ಯ ಮತ್ತು ಪುರಾಣ ಈ 3 ಅಂಶಗಳು ಮುಪ್ಪುರಿಗೊಂಡಿರುತ್ತವೆ, ಹೀಗೆ ನಡೆಯಿತು ಎಂದು ತಿಳಿಸುವ ಇತಿಹಾಸ ತನ್ನಷ್ಟಕ್ಕೆ ತಾನೂ ಶುದ್ಧವಾಗಿರುತ್ತದೆ ಆದರೆ ಒಬ್ಬ ವ್ಯಕ್ತಿ ಒಂದು ಜನಾಂಗದ ಶ್ರೆಯೋಭಿವೃದ್ಧಿಗಾಗಿ ಸೆಣಸಾಡಿದ್ದರೆ ಅಥವ ಒಂದು ಸಂಸ್ಕೃತಿಯ ಸಂರಕ್ಷಣೆಗೆ ಹೋರಾಡಿದರೆ ಅವನ ಬಗೆಗೆ ಜನತೆ ಗೌರವಧಾರಗಳನ್ನು ಬೆಳೆಸಿಕೊಳ್ಳುವುಲ್ಲದೆ ಅವರಿಗೆ ಕೃತಜ್ಞತೆಯನ್ನು ತೋರಿಸುವಾಗ ಅವರ ವ್ಯಕ್ತಿತ್ವವನ್ನು ಅಸಮಾನ್ಯತೆಯ ಮುಟ್ಟಕ್ಕೇರಿಸಲು ಪ್ರಯತ್ನಿಸುತ್ತದೆ [2]

ಮೌಖಿಕ ಮಹಾಕಾವ್ಯಗಳು ಜನರ ಬಾಯಿಂದ ಬಾಯಿಗೆ ಅಂದರೆ ಕಂಠಸ್ಥ ಪರಂಪರೆಯಿಂದ ಹುಟ್ಟಿ ಗಾಯಕ ಸಂಪ್ರದಾಯದ ಮೂಲಕ ತಲತಲಾಮಾರುಗಳಿಂದ ಜೀವಂತವಾಗಿರುವ ಒಂದು ಕಾವ್ಯ ಸಂಪ್ರದಾಯವಾಗಿದೆ. ಕಾಲ ಬದಲಾದಂತೆ ಈ ಮೌಖಿಕ ಕಾವ್ಯಗಳು ಅಧ್ಯಯನ ದೃಷ್ಟಿಯಿಂದ ವಿಶಿಷ್ಟವೂ ಮಹತ್ವವೂ ಆಗುತ್ತಾ ಬಂದವು. ಮೌಖಿಕ ಮಹಾಕಾವ್ಯಗಳು ಮುಖ್ಯವಾಗಿ ನಾಯಕ ಕೇಂದ್ರಿತವಾದ ಕಥೆಯಾಗಿರುತ್ತದೆ ತನ್ನ ಘನತೆಯನ್ನು ಕಾಪಾಡಿಕೊಳ್ಳಲು ನಾಯಕನು ಯಾವುದೇ ರೀತಿಯ ಸವಾಲನ್ನು ಎದುರಿಸಲು ತಯಾರಿರುತ್ತಾನೆ. ಈ ಉದ್ದೇಶ ಸಾಧನೆಗಾಗಿ ಅವನು ಮಾನುಷ್ಯ ಹಾಗೂ ಅತಿಮಾನುಷ ಶಕ್ತಿಗಳೊಡನೆ ಮುಖಾಮುಖಿಯಾಗಿ ಹೋರಾಡುತ್ತಾನೆ.[3]

ಮೌಖಿಕ ಕಾವ್ಯಗಳ ನಾಯಕ ಧೀರೋದತ್ತನಾಗಿದ್ದು, ಪ್ರತಿಯಾಗಿ ಅವನಿಗೆ ಖಳನಾಯಕರಿರುತ್ತಾರೆ. ನಾಯಕ ಪ್ರತಿನಾಯಕರ ನಡುವಿನ ಸಂಘರ್ಷವೇ ಸಮುದಾಯಗಳ ಒಟ್ಟು ಜೀವನ ವಿಧಾನವಾಗಿರುತ್ತದೆ. ಜನಪರ ಸಂಸ್ಕೃತಿ ಹಾಗೂ ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ಬದುಕಿನ ಪರಿವರ್ತನೆಗೆ ಸಹಾಯಕವಾಗುತ್ತದೆ..

ಮೌಖಿಕ ಮಹಾಕಾವ್ಯಗಳಲ್ಲಿ ಸಮಾನತೆ ಅಧ್ಯಾತ್ಮಿಕತೆ, ಮನೋಧರ್ಮ, ಸಾಹಿತ್ಯಿಕ ಪರಂಪರೆ ಅಮುಖ್ಯವಾಗುತ್ತದೆ. ಸಂಚಾರ ಮಡುತ್ತಾ ಅಲೆಮಾರಿಗಳಾಗಿ ಸುತ್ತುತ್ತಿದ್ದ ಸಂಚಾರಿ ಗಾಯಕರ ಮೂಲಕ ಮೌಖಿಕ ಕಾವ್ಯ ಹುಟ್ಟಿಕೊಂಡಿತು. ಗಾಯಕರು ಜನಸಾಮಾನ್ಯರ ಸಭೆಗಳಲ್ಲಿ ಅಲ್ಲಲ್ಲಿ ಹಾಡುತ್ತಾ ಹೋಗುತ್ತಿದ್ದರು ಇವು ಬೇರೆ ಕಾವ್ಯಗಳಾಗಿದ್ದು ಅಸಮಾನ್ಯ ವ್ಯಕ್ತಿಗಳ ಧೈರ್ಯ ಶೌರ್ಯಗಳು ನಿರೂಪಿತವಾಗಿರುತ್ತದೆ.

**ಮೌಖಿಕ ಮಹಾ ಕಾವ್ಯಗಳ ರಾಚನಿಕ ಸ್ವರೂಪ**

ಮಹಾ ಕಾವ್ಯಗಳಿಗೆ ತನ್ನದೇ ಆದ ವಿಶಿಷ್ಟ ಗುಣ ಇರುತ್ತದೆ. ಈ ಕಾವ್ಯಗಳು ಸಮುದಾಯ–ಸಮುದಾಯಗಳ ನಡುವೆ ಆಚಾರ–ವಿಚಾರಗಳ ಮೂಲಕ ಸಂವಹನ ನಡೆಸುತ್ತದೆ. ಆದ್ದರಿಂದ ಮೌಖಿಕ ಕಾವ್ಯಗಳ ರಚನೆಯ ಒಂದು ಕಾಲಕ್ಕೆ ನಿಲ್ಲದೆ ಬದಲಾಗುತ್ತಾ ಅದ್ಭುತ ಸಾಧನಗಳ ಸ್ಮರಣೆಯಾಗುತ್ತದೆ.

ಮೌಖಿಕ ಕಾವ್ಯ ರಚನೆಯ ಸ್ಥೂಲ ಕಲ್ಪನೆಯ ಆಧುನಿಕ ಸಂದರ್ಭದಲ್ಲಿ ವಿದ್ವಾಂಸರು ಬಹುಮುಖ್ಯ ವರ್ಗೀಕರಣವನ್ನು ಕಾಣುತ್ತಾರೆ ಅವರ ಅವಲೋಕನದ ಪ್ರಕಾರ "*ವೈಶಿಷ್ಟ ಹಾಗೂ ಸಾಂಸ್ಕೃತಿಕ, ಐತಿಹಾಸಿಕ ವ್ಯತ್ಯಾಸಗಳನ್ನು ಕಾವ್ಯ ಬೆಳೆವಣಿಗೆಯಲ್ಲಿ ಗುರುತಿಸುತ್ತಾರೆ, ಅವು ಜೀವಂತವಾಗಿರುವ ಸಂಪ್ರದಾಯದ ಕಡೆಗೆ ಒತ್ತು ಕೊಡುವುದರಿಂದ ಕ್ರಿಯಾಶೀಲ ರಚನೆಗಳೇ ಹೊರತು ಕಮರಿದ ನೆನಪುಗಳಲ್ಲ.*"[4]

ಮೌಖಿಕ ಕಾವ್ಯಗಳ ರಾಚನಿಕತೆ ವಿಶಿಷ್ಟವಾಗಿದ್ದು ತೀ.ನಂ. ಶಂಕರ ನಾರಾಯಣರವರು ತಮ್ಮ ಜನಪದ ಸಾಹಿತ್ಯ ಪ್ರಕಾರಗಳು ಎಂಬ ಪುಸ್ತಕದ 88–89ರ ಪುಟದಲ್ಲಿ ಕೆಲವು ರಾಚನಿತ ಸ್ವರೂಪದ ಕುರಿತು ಹೇಳಿದ್ದಾರೆ

- ಕಂಠಸ್ಥ ಸಂಪ್ರದಾಯದಲ್ಲಿ ಯಾವ ಪ್ರಕಾರವೂ ಏಕ ಕರ್ತೃತವಲ್ಲ ಅಂತೆಯೇ ಮಹಾಕಾವ್ಯ ಕೂಡ ಇದರ ಒಂದೊಂದು ಭಾಗವೂ ಸುರ್ಧಿರ್ಘವಾಗಿದೆ.
- ಕಾವ್ಯ ವಾಚನ ಸಾಮಾನ್ಯವಾಗಿ ರಾತ್ರಿ ವೇಳೆಯಲ್ಲಿಯೇ ಜರುಗುತ್ತದೆ. ರೂಢಿ ಜಾತ್ರೆ, ಉತ್ಸವ ಸಂದರ್ಭಗಳಲ್ಲಿ ಮಾತ್ರ ಹಗಲು ರಾತ್ರಿ ಪ್ರದರ್ಶನವಾಗುತ್ತದೆ.
- ಕಥಾನಕಗಳನ್ನಷ್ಟೆ ಹಾಡಿ ಪ್ರದರ್ಶನ ನೀಡುವುದು ಕ್ರಮ, ಇಲ್ಲಿ ಪ್ರದರ್ಶನದ ಸಂದರ್ಭ, ಹಾಡುಗಾರಿಕೆ ನಡೆಸಿಕೊಡುವುದರ ಸಾಮರ್ಥ್ಯ ಹಾಗೂ ಶ್ರೋತೃಗಳ ಆಸಕ್ತಿ ಗಣನೆಗೆ ಬರುತ್ತದೆ.
- ಮಹಾಕಾವ್ಯಗಳ ನಾಯಕರು ಸಾಂಸ್ಕೃತಿಕ ವೀರರಾಗಿದ್ದು ಒಂದು ಗೊತ್ತಾದ ಪ್ರದೇಶ ಮತ್ತು ಸಮಾಜಕ್ಕೆ ಸಂಬಂಧಿಸಿದವರಾಗಿರುತ್ತಾರೆ.
- ಜನಪದ ಮಹಾಕಾವ್ಯಗಳು ಸಾಮಾನ್ಯವಾಗಿ ಬಿಡಿ ಪ್ರಸಂಗಗಳ ಕಥಾಗುಚ್ಛಗಳಾಗಿರುತ್ತದೆ.

ಹೀಗೆ ಪ್ರತ್ಯೇಕ ಅಸ್ತಿತ್ವ ಹೊಂದಿದ ಬಿಡಿ ಪ್ರಸಂಗಗಳಲ್ಲಿ ಏಕಸೂತ್ರತೆಯ ಎಳೆಯೂ ಬಂದಿದ್ದು ಆ ಪ್ರಸಂಗಗಳು ಒಂದೇ ಕಾವ್ಯದ ಭಾಗಗಳು ಎಂಬುದನ್ನು ಸಮರ್ಥಿಸುವಂತಿರುತ್ತವೆ.

ಕನ್ನಡದ ಮೌಖಿಕ ಪರಂಪರೆಯ ಮಹಾಕಾವ್ಯದೊಳಗಿನ ಬಿಡಿ ಬಿಡಿ ಕಥಾನಕಗಳನ್ನು ಒಟ್ಟಾಗಿ ಸಂಗ್ರಹಿಸುವ ಕಾರ್ಯ ಅಕ್ಷರಬಲ್ಲಂತ ಸಂಶೋಧಕರು ಮಾಡುತ್ತಿದ್ದಾರೆ. ಇವರ ಮುಖ್ಯ ಆಶಯಗಳೆಂದರೆ

ಮಲೆಮಾದೇಶ್ವರ, ಮಂಟೇಸ್ವಾಮಿ, ಜುಂಜಪ್ಪ ಮೈಲಾರ, ಕುಮಾರರಾಮಾನ ಕಾವ್ಯ ಗೊಂಡರ ರಾಮಾಯಾಣ, ಮ್ಯಾಸಬೇಡರ ಕಥನಗಳು, ಮಾಳಿಂಗರಾಯ ಕಾವ್ಯ ಮುಂತಾದವುಗಳು ಕನ್ನಡ ವಿಶ್ವವಿದ್ಯಾಲಯದ ಪ್ರಸಾರಾಂಗದಿಂದ ಪ್ರಕಟಗೊಂಡವು ಇವು ಮುಂದಿನ ತಲೆಮಾರಿನ ಮೌಖಿಕ ಚರಿತ್ರೆಗೂ ಮೂಲ ದಾಖಲೆಯ ಆಕರಗಳಾಗಿವೆ. ಈ ಕಾರ್ಯಾಗಳನ್ನು ಹಾಡುವ ವೃತ್ತಿಗಾಯಕರ ಒಂದು ಗುರು ವರ್ಗವೇ ಇದೆ. “ಮಲೆಯದೇಶ್ವರ ಕಾವ್ಯ ಹಾಡುವ ಕಂಸಾಳೆ ವರ್ಗ, ಮಂಟೇಸ್ವಾಮಿ ಕಾವ್ಯ ಹಾಡುವ ನೀಲಗಾರರು, ಜುಂಜಪ್ಪ ಕಾವ್ಯವನ್ನು ಹಾಡುವ ಗಣೆಯವರು, ಮೈಲಾರಲಿಂಗನ ಕಾವ್ಯ ಹಾಡುವ ಗೊರವರು, ಕುಮಾರರಾಮ ಕಾವ್ಯ ಹಾಡುವ, ಬುರ್ರಕಥಾ ಪಂಥದವರು ಹೇಗೆ ಪರಂಪರಾಗತ ಮೌಖಿಕ ಸಂಪ್ರದಾಯಬದ್ಧ ವರ್ಗವೇ ನಾಡಿನಲ್ಲಿವೆ”[5]

ಮೌಖಿಕ ಕಾವ್ಯಗಳು ಜನ ಸಮುದಾಯಗಳ ಬದುಕನ್ನು ತಮ್ಮ ಹರವಿನಲ್ಲಿ ಪಡೆದುಕೊಂಡಿದ್ದು ಪ್ರತಿಯೊಂದು ಕಾವ್ಯಗಳು ಮಾನವೀಯ ಆಲೋಚನೆಯ ಪ್ರಗತಿಪರ ಚಿಂತನೆಗೆ ಬುನಾದಿಯಾಗಿದ್ದು ಹೊಸ ಪರಂಪರೆಯ ಸ್ಥಾಪನೆಗೆ ಕಾರಣವಾಗಿದೆ.

**ಮೌಖಿಕ ಕಾವ್ಯಗಳು – ಸಾಹಿತ್ಯ**

ಸಾಹಿತ್ಯ ಎಂದರೆ ಬರವಣಿಗೆಯ ರೂಪದಲ್ಲಿರುವುದು ಎಂಬ ಕಲ್ಪನೆ ಒಂದು ಕಾಲದಲ್ಲಿ ನೆಲೆಯೂರಿತ್ತು. ಹಾಗೂ ಕಾವ್ಯತ್ಮಕ ತತ್ವಗಳಿಂದ ಮೂಡಿಬಂದ ಅಭಿವ್ಯಕ್ತಿಯೇ ಸಾಹಿತ್ಯ ಎನ್ನುವ ಅಭಿಪ್ರಾಯವೂ ಇತ್ತು. “ಮೌಖಿಕ ಪರಂಪರೆಯ ಅಭಿವ್ಯಕ್ತಿಗಳು ಒಂದು ಹಂತದಲ್ಲಿ ಬರವಣಿಗೆಯ ಸಾಹಿತ್ಯದ ಅಭಿವ್ಯಕ್ತಿಗಳಿಗಿಂತ ಸಾಚಾತನದಿಂದ ಕೂಡಿರುತ್ತವೆ”[6] ಏಕೆಂದರೆ ಜನ ಸಾಮಾನ್ಯರು ಮೌಖಿಕವಾಗಿ ವ್ಯಕ್ತಪಡಿಸಿದ ವಿಚಾರಗಳು ಬದುಕಿನ ಕ್ರಮಕ್ಕೆ ಸಂಬಂಧ ಪಟ್ಟಿರುತ್ತದೆ.

ಸಾಹಿತ್ಯದ ಒಂದು ವಿಶಿಷ್ಟ ರೂಪವೇ ಕಾವ್ಯವಾಗಿದೆ. ಭಾಷೆ ಎಷ್ಟು ಪ್ರಾಚೀನವಾಗಿದೆಯೋ ಕಾವ್ಯವೂ ಅಷ್ಟೇ ಪ್ರಾಚೀನವಾಗಿದೆ. ಅನಾದಿಕಾಲದಿಂದ ಜನರ ಭಾವನೆ ಮತ್ತು ಅನುಭವಗಳಿಗೆ ಒಂದು ಮಾಧ್ಯಮವಾಗಿ ಕಾವ್ಯ ಬೆಳೆದು ಬಂದಿದೆ. ಮೌಖಿಕ ಚಲನೆಯಿಂದಲೇ ಭಾಷೆ ಹುಟ್ಟಿಕೊಂಡಿತು. ಭಾಷೆ ಲಿಖಿತಗೊಂಡತೆ ಮಾನವನ ಜೀವನ ವಿಕಾಸವಾಗುತ್ತಾ ಮೌಖಿಕ ಮತ್ತು ಲಿಖಿತ ಪರಂಪರೆಗಳೆರಡರಲ್ಲೂ ಒಂದು ಶಕ್ತಿ ಪ್ರದರ್ಶನದಂತೆ ಬಳಕೆಗೊಂಡವು. ಸಾಹಿತ್ಯವು ಮೌಖಿಕ ಕಾವ್ಯಗಳಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಕಾವ್ಯಗಳಲ್ಲಿ ಬರುವ ಭಾಷೆ, ಛಂದಸ್ಸು, ಲಯ, ನಾದ, ಇವುಗಳನ್ನು ಸಾಹಿತ್ಯಿಕ ರೂಪವದಲ್ಲಿ ಹೇಳುವಾಗ ಶಿಷ್ಟ ಸಾಹಿತ್ಯ ನೆರವಾಗುತ್ತದೆ.

"ಕನ್ನಡ ಕಾವ್ಯ ಪರಂಪರೆಯ ಮಾರ್ಗ–ದೇಶಿ ನಿಲುವುಗಳ ಕುರಿತು ಇಲ್ಲಿ ಆಲೋಚಿಸಲು ಸಾಧ್ಯವಿದೆ ಅಂದರೆ ಕನ್ನಡ ಕಾವ್ಯ ಮತ್ತು ಜನಪದ ಕಾವ್ಯದ ನಡುವೆ ಕನ್ನಡ ಜನಪದ ಮಹಾಕಾವ್ಯಗಳನ್ನು ಬೆಸೆಯಲು ಇಲ್ಲಿ ಸಾಧ್ಯವಾಗಬಲ್ಲದೆನ್ನುವುದೇ ಇದರ ಹಿಂದಿನ ತಾತ್ವಿಕ ವಿಚಾರ ಜನಪದ ಶಿಷ್ಟಕಂದರಗಳನ್ನು ಜೋಡಿಸುವ ಒಂದಲ್ಲ ಒಂದು ಪ್ರಕ್ರಿಯೆಯಾಗಿದೆ ಹೊರತು ಮೌಖಿಕ ರಚನೆಯ ಸಾಧ್ಯತೆಗಳ ಲಿಖಿತ ಪರಂಪರೆಯ ಆಶ್ರಮಕ್ಕೆ ಲಿಖಿತ ಪರಂಪರೆಯ ಈ ಸಾಧ್ಯತೆಗಳಿಂದ ನವ ಮೌಖಿಕತೆಯನ್ನು ಹೊಸದಾಗಿ ಕಟ್ಟುವ ಹೊಸ ಪ್ರಸಾರ ಹೊಂದುವ ಎಲ್ಲಾ ಬಗೆಯ ಬೆಳವಣಿಗೆಗಳು ಕನ್ನಡ ಸಾಹಿತ್ಯದಲ್ಲಿ ಕಾಣಿಸಿಕೊಂಡಿದೆ".[7]

ಮೌಖಿಕ ಕಾವ್ಯಗಳು ಸಾಂಸ್ಕೃತಿಕ ವೀರರ ಪವಾಡ ಕಥೆಗಳಾಗಿವೆ. ಇವರ ಹುಟ್ಟಿನಿಂದ ಸಾವಿನವರೆಗೆ ಬರುವ ಸಾಹಸ ಮತ್ತು ಮಹಿಮೆಗಳನ್ನು ದೈವದೊಂದಿಗೆ ಸಮೀಕರಿಸಿ ವರ್ಣಾತ್ಮಕವಾಗಿ ಹೇಳುತ್ತಾರೆ. ಹಾಗೆ ಹೇಳುವಾಗ ಉಪಮಾ ಪ್ರತಿಮಾತ್ಮಕ ಗುಣಗಳು ಕಾಣಿಸಿಕೊಳ್ಳುತ್ತವೆ. ಮಹಾಕಾವ್ಯಗಳು ಸರಳ ಶೈಲಿಯ ನಿರೂಪಣೆಯಿಂದ ಕೂಡಿದ್ದು ಆಡುಮಾತಿನಂತೆ ಸುಲಭವಾಗಿ ಅರ್ಥವಾಗುವಂತಿರುತ್ತದೆ ಹಾಗೂ ಶಬ್ಧ ಸಂಪತ್ತು, ಪ್ರಾದೇಶಿಕತೆ, ಗಾದೆ, ಒಗಟು ನಾಣ್ಣುಡಿ, ನುಡಿಗಟ್ಟುಗಳು ಎಲ್ಲವನ್ನು ಮಹಾಕಾವ್ಯಗಳು ಒಳಗೊಂಡಿರುತ್ತವೆ. ಗಾಯಕರು ಕಾವ್ಯ ವಾಚನ ಮಾಡುವಾಗ ಮುಮ್ಮೇಳ, ಹಿಮ್ಮೇಳದವರ ಸಾಲುಗಳ ಪುನರಾವರ್ತನೆ ಮಾಡುತ್ತಾ ದ್ವಿರುಕ್ತಿಯನ್ನು ಬಳಸುತ್ತಾರೆ. ಹಾಗೂ ಅಲ್ಲಲ್ಲಿ ಹಾಡಿನ ಲಯಕ್ಕಾಗಿ ಪ್ರಾಸವನ್ನು ಬಳಸುತ್ತಾರೆ. ಕೆಲವು ಕಾವ್ಯಗಳ ನಿರೂಪಣೆಯಲ್ಲಿ ಪದ್ಯ ಗದ್ಯ ರೀತಿಯಲ್ಲಿ ಕಂಡು ಬರುತ್ತದೆ.

**ಮೌಖಿಕ ಮಹಾಕಾವ್ಯಗಳ ಪಠ್ಯೀಕರಣ**

"ಆಧುನಿಕತೆ ಮಾನವ ಸಮಾಜವನ್ನು ಪ್ರವೇಶಿಸುತ್ತಿದ್ದಂತೆ ಮೌಖಿಕ ಕಾವ್ಯಗಳು ವಿನಾಶದ ಕಡೆಗೆ ಸಾಗುತ್ತಿವೆ ಎಂಬ ಕಾರಣದಿಂದ ಅವುಗಳನ್ನು ಲಿಖಿತ ರೂಪಕ್ಕೆ ತರಲು ಅನೇಕ ಸಂಶೋಧಕರು ಅಧ್ಯಯನಕಾರರು ಪ್ರಾರಂಭಿಸಿದರು. ಪ್ರಾರಂಭದಲ್ಲಿ ಕಾವ್ಯಗಳ ಧ್ವನಿ ಮುದಣ್ರದಲ್ಲಿ ದಾಖಲಿಸುವ ಪ್ರಯತ್ನ ಮಾಡಿದರೂ ಅವು ಹೆಚ್ಚು ಕಾಲ ತಮ್ಮ ಗುಣಮಟ್ಟವನ್ನು ಕಾಪಾಡಿಕೊಳ್ಳುವಲ್ಲಿ ವಿಫಲವಾಯಿತು. ಆದ್ದರಿಂದ ಅಧ್ಯಯನಕಾರರು ಕಾವ್ಯಗಳನ್ನು ಲಿಖಿತ ರೂಪಕ್ಕೆ ತಂದು ಪಠ್ಯೀಕರಣಗೊಳಿಸುತ್ತಾ ಬಂದರೂ ಪಠ್ಯ ರೂಪಕ್ಕೆ ತರುವಾಗ ಅದರ ಸಂಗೀತ ರಾಗ, ತಾಳ, ಸ್ವರ, ಹಿಮ್ಮೇಳ, ಮುಮ್ಮೇಳಗಳನ್ನು ಸಹ ದಾಖಲಿಸುತ್ತಿದ್ದರು, ಕಾವ್ಯಗಳು ಲಿಖಿತ ರೂಪಕ್ಕೆ ಬಂದಾಗಲೇ ಅವುಗಳಿಗೆ ಒಂದು ಸಾಂಸ್ಕೃತಿಕ ಮುಖಾಮುಖಿ ಆರಂಭಗೊಳ್ಳುತ್ತದೆ, ಕಾವ್ಯಗಳ ಸಂಪಾದಕರಿಂದ ಲಿಖಿತಗೊಂಡ ಮಲೆಮಾದೇಶ್ವರ, ಮಂಟೇಸ್ವಾಮಿ, ಮೈಲಾರ, ಜುಂಜಪ್ಪ, ಕುಮಾರರಾಮ ಮೊದಲಾದ ಮೌಖಿಕ ಮಹಾಕಾವ್ಯಗಳನ್ನು ಶಿಷ್ಟ ರೂಪಕ್ಕೆ ತಂದುದರ ಫಲವಾಗಿ ಕಾವ್ಯಗಳ ಬದಲಾವಣೆಗೊಳಪಟ್ಟವು ಹೀಗಾಗಿ ಯಾವುದೇ ಒಂದು ಪಠ್ಯ ಸಂದರ್ಭ ನಿಷ್ಟವಾಗಿದ್ದರೂ ಪಠ್ಯದ ಕೆಲವು

ಭಾಗಗಳು ಸ್ವತಂತ್ರವಾಗಿಯೊ ಇರಲಾರವು. ಉದಾ: ಮಹಾಕಾವ್ಯದ ಕೆಲವು ವಿಷಯಗಳು ಮಾತ್ರ ಸಂದರ್ಭ ಕಾಲ ಬದ್ಧವಾಗಿ ಸದಾ ಬದಲಾಗುತ್ತಿರುತ್ತವೆ. ಆದರೆ ಕಾವ್ಯದ ಮೂಲ ಆಶಯಗಳು ಬದಲಾಗುತ್ತವೆ ಎಂದು ಹೇಳಲಾಗುವುದಿಲ್ಲ"[8]. ಆದ್ದರಿಂದ ಕಾವ್ಯವು ಪರಿವರ್ತನೆಗೊಳ್ಳವಿಕೆಯನ್ನು ಒಂದು ಕಾವ್ಯವನ್ನು ಹಾಡುವಾಗ ಆ ಕಾವ್ಯದ ಧ್ವನಿ ಏರಿಳಿತ, ಹಾವಭಾವ, ಸಂಗೀತವನ್ನು ಅದರ ರೂಪದಲ್ಲಿಯೇ ಗುಣಮಟ್ಟವನ್ನು ಕಾಯ್ದುಕೊಳ್ಳಬೇಕು. ಇದರ ಜೋತೆಯಲ್ಲಿಯೇ ಹಾಡುಗಾರನ ವೈಯಕ್ತಿಕ ಜೀವನ ವಿಧಾನ, ವಿವರ, ಸಮುದಾಯ, ಸಂಪ್ರದಾಯಕ್ಕೆ ಸಂಬಂಧಿಸಿದ ವಿಚಾರಗಳನ್ನು ದಾಖಲಿಸಿಕೊಳ್ಳಬೇಕಾಗುತ್ತದೆ. ಆಗ ಮಾತ್ರ ಕಾವ್ಯದ ಸ್ವರೂಪ ಹಾಡುಗಾರರ ಸಾಂಸ್ಕೃತಿಕ ಅಭಿವ್ಯಕ್ತಿಯನ್ನೇ ಪಠ್ಯೀಕರಣಗೊಳಿಸಿ ಅಧ್ಯಯನಕ್ಕೆ ಸುಲಭವಾಗುತ್ತದೆ. ಇದರಿಂದಾಗಿ ಆ ಕಾವ್ಯದ ವಾಸ್ತವತೆ ತಿಳಿಯಲು ಸಹಾಯವಾಗುತ್ತದೆ. ಕಾವ್ಯಗಳು ಪಠ್ಯೀಕರಣಗೊಳ್ಳುವ ಮುನ್ನ ಹೇಗೆ ಸಂಗ್ರಹಿಸಬೇಕು, ಅದಕ್ಕಾಗಿ ಅನುಸರಿಸಬೇಕಾದ ಕ್ರಮಗಳು ಮಾಧ್ಯಮಗಳೇನು ಎಂಬ ಪ್ರಶ್ನೆಗಳು ಸಂಶೋಧಕನ್ನು ಕಾಡತೊಡಗಿದವು. ಏಕೆಂದರೆ ಭಾರತದಲ್ಲಿರುವ ಅನೇಕ ಕಾವ್ಯಗಳಲ್ಲಿ ಒಂದೊಂದು ಪ್ರದೇಶದಲ್ಲಿ ಒಂದೊಂದು ರೀತಿಯಲ್ಲಿ ಬೇರೆ ಬೇರೆ ಸಮುದಾಯ ಬೇರೆ ಬೇರೆ ಸಂದರ್ಭದಲ್ಲಿ ಹಾಡುತ್ತಿತ್ತು ಅದರ ವಾಸ್ತವಸಹಿತವಾಗಿ ಸಂಗ್ರಹಿಸಲು ಅಧ್ಯಯನಕಾರರು ವಿವಿಧ ಮಾಧ್ಯಮಗಳ ಮೂಲಕ ಪ್ರಾರಂಭಿಸಿದರು ಈ ದೃಷ್ಟಿಕೋನದಲ್ಲಿ ನೋಡುವುದಾದರೆ ಮಹಾಕಾವ್ಯಗಳನ್ನು ಮೊಟ್ಟಮೊದಲಿಗೆ ಸಂಗ್ರಹಿಸಿ ಅಧ್ಯಯಕ್ಕೆ ಒಳಪಡಿಸಿದ ಅಧ್ಯಯನಕಾರ ಥಿನ್ನಷ್. ಇವರು ***ಚಾರಿತ್ರಿಕ ಭೌಗೋಳಿಕವಾದ*** ಎಂಬ ಸಿದ್ಧಾಂತದ ಮೂಲಕ ಥಿನ್ನಷ್ ವಿದ್ವಾಂಸರು ಪ್ರಾರಂಭಿಸಿದರು. ನಂತರ ಕಾವ್ಯಗಳ ಕುರಿತು ಸಂಗ್ರಹಣೆ ಕರ್ನಾಟಕದಲ್ಲಿ ನಡೆಯಲಾರಂಭಿಸಿತು. ಪರಮಶಿವಯ್ಯ ಜೀ.ಶಂ., ರಾಜಶೇಖರ್ ಪಿ.ಕೆ., ಶಂಕರನಾರಾಯಣ ತೀ.ನಂ., ರಾಮಚಂದ್ರೇಗೌಡ ಹಿ.ಶಿ., ಬೋರಲಿಂಗಯ್ಯ ಹಿ.ಚಿ., ಕೇಶವನ್ ಪ್ರಸಾದ್, ಮರಟ್ಟಿ ಚಲುವರಾಜು, ಗಂಗಾಧರ ದೈವಜ್ಞ, ಮೇತ್ರಿ ಕೆ.ಎಂ., ಮಂಜುನಾಥ ಬೇವಿನಕಟ್ಟಿ ಮೊದಲಾದವರು 20ಕ್ಕೂ ಹೆಚ್ಚು ಕಾವ್ಯಗಳ ಮೂಲ ಪಠ್ಯವನ್ನು ಸಂಗ್ರಹಿಸಿ ಪಠ್ಯೀಕರಣಗೊಳಿಸಿದರು.

ಈ ರೀತಿಯಾಗಿ ಒಂದು ನಂಬಿಕೆ ಸಂಪ್ರದಾಯ ಕಟ್ಟಿಕೊಡುವ ಸಮುದಾಯಗಳು ಮೌಲ್ಯಗಳನ್ನು ಅಧ್ಯಯನಕಾರರು ಪಠ್ಯೀಕರಣ ಮಾಡುವುದರ ಮೂಲಕ ಮೌಖಿಕ ಸಂಸ್ಕೃತಿಯ ಉಳಿವಿಗೆ ಬುನಾದಿ ಹಾಕಿದರು ಈ ಮೂಲಕ ಈಗಿನವರೆಗೊ ಮೌಖಿಕ ಕಾವ್ಯಗಳ ಪಠ್ಯೀಕರಣ ಮುಂದುವರೆಯುತ್ತಾ ಬಂದಿದ್ದು ಅನೇಕ ಸಮುದಾಯಗಳ ಕಾವ್ಯಗಳು ಆಧುನಿಕ ಜಗತ್ತಿಗೆ ತೆರೆದುಕೊಳ್ಳುತ್ತಿವೆ.

**ಮೌಖಿಕ ಮಹಾಕಾವ್ಯಗಳು: ಚರಿತ್ರೆ**

ಚರಿತ್ರೆ ಎಂಬುದು ವಾಸ್ತವಾಂಶಗಳನ್ನು ನಿರೂಪಿಸುವ ಪ್ರಕಾರವಾಗಿದೆ. ಇಲ್ಲಿ ಕಲ್ಪನೆಗಳಿಗೆ ಅವಕಾಶವಿಲ್ಲ. ಈ ಕಲ್ಪನೆ ಪಾಶ್ಚಾತ್ಯರಿಂದ ಎರವಲು ಪಡೆದಿದ್ದು. ಆದರೂ ಮುಂಚೆ ಚರಿತ್ರೆಗೆ ಬದಲಾಗಿ ಇತಿಹಾಸ ಎಂಬ ಪದವನ್ನೂ ಬಳಸುತ್ತಿದ್ದವು. ಹಿಂದೆ ಹೀಗೆ ಇತ್ತು ನಡೆಯಿತು ಎಂಬುದನ್ನು ಹೇಳುವುದೇ ಇತಿಹಾಸವಾಗಿದೆ. ಅಂದರೆ ಇತಿಹಾಸಕಾರರ ಪ್ರಕಾರ ಹಿಂದೆ ವಾಸ್ತವವಾಗಿ ನಡೆದದ್ದರ ನಿರೂಪಣೆಯೇ ಇತಿಹಾಸವಾಗಿದ್ದು ಅದು ಚರಿತ್ರೆಯಾಗಿ ರೂಪಾಂತರಗೊಳ್ಳುತ್ತದೆ. ಆಧುನಿಕ ಕಾಲದಲ್ಲಿ ಮೌಖಿಕ ಕಾವ್ಯಗಳ ಸಂಗ್ರಹಣೆ ಮೂಲಕ ಹೊಸ ಚರಿತ್ರೆ ನಿರ್ಮಿಸಿದವರು ಪಾಶ್ಚಿಮಾತ್ಯರು.

"ಮೌಖಿಕ ಚರಿತ್ರೆಯ ಸಾಮಾನ್ಯ ಮಾನವನ ಚರಿತ್ರೆಯಾಗಿದ್ದು ವ್ಯಕ್ತಿಗತ ವೈಭವ ಮತ್ತು ದುರಂತಗಳಲ್ಲಿ ಶ್ರೀಮಂತವಾಗಿದೆ. ಇದು ದಾಖಲೆಯಲ್ಲಿದ್ದರೂ ಅನುಚ್ಚಿತವಾದುದಲ್ಲ, ಮೌಖಿಕ ಚರಿತ್ರೆಯೂ ಗಣನೀಯವಾಗಿ ಐತಿಹಾಸಿಕ ಜ್ಞಾನದ ಸೀಮೆಯನ್ನು ವಿಸ್ತರಿಸಿದೆ"[9]

ಚರಿತ್ರೆಯ ನಿರ್ಮಾಣಗೊಂಡನಂತರ ಅಲ್ಲಲ್ಲಿ ಪುರಾಣ, ವಚನ, ಶಾಸನ, ಕೈಫಿಯತ್ತುಗಳು ರೂಪದಲ್ಲಿ ನಮ್ಮ ಸಾಂಸ್ಕೃತಿಕ ನಾಯಕರು ದಾಖಲೀಕರಣಗೊಳ್ಳುತ್ತಾರೆ. ಈ ರೀತಿ ದಾಖಲೆಗೊಂಡ ವಿಚಾರಗಳು ಅಧಿಕೃತವೆಂದು ವಿದ್ವಾಂಸರು ತಮ್ಮ ತಮ್ಮ ಕಾವ್ಯ ಸಂಗ್ರಹಗಳ ಸಮಯದಲ್ಲಿ ಹೇಳುತ್ತಾರೆ. ಅದನ್ನೇ ಪಠ್ಯ ರೂಪಕ್ಕೆ ತರುವಾಗ ಗಾಯಕರು ಸಮುದಾಯದವರು ಕಟ್ಟಿಕೊಡುವ ಕಾಲಾತೀತವಾದ ನಂಬಿಕೆಯನ್ನೇ ಚರಿತ್ರೆಯ ಪ್ರಧಾನ ಗುಣವಾಗಿ ಕಾಣಿಸಿಕೊಳ್ಳುತ್ತದೆ. ಮೌಖಿಕ ಕಾವ್ಯಗಳು ಸಾಂಸ್ಕೃತಿಕ ವೀರನೊಬ್ಬನ ಸಾಹಸಗಾಥೆಗಳಾಗಿಸಿ ಇವು ಜನರ ಹೃದಯದಲ್ಲಿ ವೀರನು ನೆಲೆಯೂರಿದಾಗ ಸಮುದಾಯಗಳು ತಮ್ಮ ನಾಯಕನ ಕುರಿತು ಕಾವ್ಯಗಳನ್ನು ಕಟ್ಟುತ್ತಾರೆ. ಮುಂದೆ ಇದು ಜನರ ಸ್ಮರಣೆಯಲ್ಲಿ ಉಳಿದು ಇತಿಹಾಸವಾಗಿ ರೂಪಾಂತರಗೊಂಡು ಮೌಖಿಕ ಚರಿತ್ರೆಯಾಗುತ್ತದೆ. ಈ ಹಿನ್ನೆಯಲ್ಲಿ ಅವು ವಕ್ತೃಗಳಿಂದ ನೇರವಾಗಿ ಮಾಹಿತಿಯನ್ನು ಸಂಗ್ರಹಿಸಲು ಪ್ರಯತ್ನಿಸಿದ ಫಲವೇ ಮೌಖಿಕ ಕಾವ್ಯಗಳ ಕುರಿತ ಚರಿತ್ರೆಯಾಗುತ್ತದೆ.

**ಅಡಿ ಟಿಪ್ಪಣಿ**

---

[1] ತೀ.ನಂ.ಶ್ರೀ: ಕರ್ನಾಟಕ ಜನಪದ ಮಹಾಕಾವ್ಯ, ಪು.ಸಂಖ್ಯೆ–4

[2] ಡಾ.ಹಿ.ಚಿ.ರಾಮಚಂದ್ರೇ ಗೌಡ: ಜನಪದ ಸಾಹಿತ್ಯ ಪ್ರಕಾರಗಳು, ಪು.ಸ–82

[3] ಅದೇ ಪು.ಸಂ. 82

[4] ತೀ.ನಂ.ಶಂಕರನಾರಾಯಣ: ಕರ್ನಾಟಕ ಜನಪದ ಮಹಾಕಾವ್ಯಗಳು, ಪು.ಸಂಖ್ಯೆ–16

[5] ಡಾ. ನಿಂಗಪ್ಪ ಮುದೇನೂರು : ಕರ್ನಾಟಕ ಜನಪದ ಮಹಾಕಾವ್ಯಗಳ ಸಾಂಸ್ಕೃತಿ ವೀರರು, ಪು.ಸ–27

[6] ಎಸ್.ಎಂ. ಮುತ್ತಯ್ಯ: ಕನ್ನಡ ಜನಪದ ಮಹಾಕಾವ್ಯಗಳು ಮತ್ತು ಪ್ರತಿ ಸಂಸ್ಕೃತಿ, ಪು.ಸ–45

[7] ಡಾ. ನಿಂಗಪ್ಪ ಮುದೇನೂರು: ಕರ್ನಾಟಕ ಜನಪದ ಮಹಾಕಾವ್ಯಗಳ ಸಾಂಸ್ಕೃತಿ ವೀರರು, ಪು.ಸ–19

[8] ಎಸ್.ಎಂ. ಮುತ್ತಯ್ಯ: ಕನ್ನಡ ಜನಪದ ಮಹಾಕಾವ್ಯಗಳು ಮತ್ತು ಪ್ರತಿ ಸಂಸ್ಕೃತಿ, ಪು.ಸ–48

[9] ಡಾ. ಹನುಮಂತಪ್ಪ : ಮೌಖಿಕ ಪರಂಪರೆ ವಿಜಯನಗರ ಚರಿತ್ರೆ. ಸಂಶೋಧನಾ ಪ್ರಭಂಧ ಪು.ಸ–116